# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 182 | Pages. 2 | Date: 28-06-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 182 - ಪುಟಗಳು : 2 | 28-06-2026 ಭಾನುವಾರ | Ph: 8762954248 | ದರ : ₹1


# ಜಿಲ್ಲಾದ್ಯಂತ ಅರ್ಥಪೂರ್ಣ ಕೆಂಪೇಗೌಡ ಜಯಂತಿ

## ಅದ್ದೂರಿ ಮೆರವಣಿಗೆಗೆ ಕಳೆತಂದ ಕಲಾ ತಂಡಗಳು | ನಾಡಪ್ರಭುವಿಗೆ ಗೌರವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸೇರಿ ಜಿಲ್ಲಾದ್ಯಂತ ಶನಿವಾರ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ತಾಲ್ಲೂಕು ಆಡಳಿತದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳು, ಅಧಿಕಾರಿ ವರ್ಗ ಹಾಗೂ ಸಂಪನ್ಮೂಲ ವ್ಯಕ್ತಿಗಳು ಕೆಂಪೇಗೌಡರ ಸೇವೆಯ ಕುರಿತು ಬೆಳಕು ಚೆಲ್ಲಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದ ಕಾಯಕ್ರಮದಲ್ಲಿ ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಮಾತನಾಡಿ, ಜಾತಿ, ಧರ್ಮ, ವರ್ಗಗಳ ಭೇದವಿಲ್ಲದೆ ಎಲ್ಲ ಸಮಾಜ ಒಗ್ಗೂಡಿಸಿಕೊಂಡು ನಾಡಪ್ರಭು ಕೆಂಪೇಗೌಡರು ಬೆಂಗಳೂರಿನಂತಹ ಮಹಾನಗರ ಕಟ್ಟಿದರು. ಅವರ ಆದರ್ಶ, ಆಡಳಿತ ವೈಖರಿ ಹಾಗೂ ಸಮಾಜಮುಖಿ ಚಿಂತನೆ ಇಂದಿನ ಪೀಳಿಗೆಗೆ ದಾರಿದೀಪ ಎಂದು ಹೇಳಿದರು.

ಮುಂದಿನ ಹಲವು ಶತಮಾನಗಳ ಬೆಳವಣಿಗೆಯನ್ನು ಮುಂಚಿತವಾಗಿ ಊಹಿಸಿದ್ದ ದೂರದೃಷ್ಟಿಯ ನಾಯಕ ಕೆಂಪೇಗೌಡ. ಅವರ ಆಡಳಿತ ವ್ಯವಸ್ಥೆ, ನಿರ್ಮಿಸಿದ ಕೆರೆ-ಕಟ್ಟೆಗಳು, ಪೇಟೆಗಳು ಹಾಗೂ ನಗರಾಭಿವೃದ್ಧಿಯ ಪರಿಕಲ್ಪನೆ ಇಂದಿಗೂ ಮಾದರಿ. ಬೆಂಗಳೂರು ಇಂದು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯಲು ಕೆಂಪೇಗೌಡರ ದೂರದೃಷ್ಟಿಯೇ ಕಾರಣ ಎಂದು ಹೇಳಿದರು.

ಇತಿಹಾಸವನ್ನು ಅರಿತವನು ಮಾತ್ರ ಹೊಸ ಇತಿಹಾಸ ಸೃಷ್ಟಿಸಲು ಸಾಧ್ಯ. ಕೆಂಪೇಗೌಡರಂತಹ ಮಹನೀಯರ ಆದರ್ಶಗಳನ್ನು ಅಳವಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಸ್ವಾಮೀಜಿ ಕರೆ ನೀಡಿದರು.

ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಕೆಲವರ ಕುತಂತ್ರದಿಂದ ಕೆಂಪೇಗೌಡರು ಸೆರೆವಾಸ ಅನುಭವಿಸಬೇಕಾಯಿತು. ಬಳಿಕ ದಂಡ ಪಾವತಿಸಿ ಬಿಡುಗಡೆಯಾಗಿ ಮತ್ತೆ ಬೆಂಗಳೂರಿನ ಅಭಿವೃದ್ಧಿಗೆ ಕೈಹಾಕಿದರು. ಆಡಳಿತಗಾರರು ಕಿವಿಗೊಡುವವರಿಂದ ಎಚ್ಚರಿಕೆಯಿಂದಿರಬೇಕು ಎಂಬ ಸಂದೇಶವನ್ನು ಅವರ ಜೀವನ ಸಾರುತ್ತದೆ ಎಂದರು.

ಸಂಸದ ಶ್ರೇಯಸ್ ಎಂ. ಪಟೇಲ್ ಮಾತನಾಡಿ, ಬೆಂಗಳೂರು ಇಂದು ವಿಶ್ವದ ಗಮನ ಸೆಳೆಯುತ್ತಿರುವ ನಗರ. ಅದಕ್ಕೆ ಅಡಿಪಾಯ ಹಾಕಿದ ಕೀರ್ತಿ ನಾಡಪ್ರಭು ಕೆಂಪೇಗೌಡರಿಗೆ ಸಲ್ಲುತ್ತದೆ. ದೂರದೃಷ್ಟಿಯ ನಾಯಕತ್ವ ಹೇಗಿರಬೇಕು ಎಂಬುದಕ್ಕೆ ಅವರ ಜೀವನವೇ ಮಾದರಿ ಎಂದು ಹೇಳಿದರು.

ಒಕ್ಕಲಿಗ ಸಮುದಾಯದಲ್ಲಿ ಹುಟ್ಟಿ ಸಂಸದನಾಗಿ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ. ಸಮಾಜದ ಬೇಡಿಕೆಗೆ ಸ್ಪಂದಿಸಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನಕ್ಕಾಗಿ 5 ಕೋಟಿ ರೂ. ಅನುದಾನ ಬಿಡುಗಡೆ ಮಾಡಿರುವುದು ಶ್ಲಾಘನೀಯ ಎಂದು ಹೇಳಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಮಾತನಾಡಿ, ಎಲ್ಲಾ ಜಾತಿ, ಜನಾಂಗಗಳನ್ನು ಒಟ್ಟಿಗೆ ಕರೆದೊಯ್ಯುವ ಮೂಲಕ ನವ ಸಮಾಜ ನಿರ್ಮಾಣ ಮಾಡಿದ ನಾಯಕ ಕೆಂಪೇಗೌಡರು ಎಂದು ಬಣ್ಣಿಸಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹಾಗೂ ಜಿಪಂ ಸಿಇಒ ಶುಭಂ ಶುಕ್ಲಾ ಮಾತನಾಡಿ, ಕೆಂಪೇಗೌಡರು ಕೋಟೆಗಳ ಜೊತೆಗೆ ಕೆರೆ, ಕಟ್ಟೆ, ಕಲ್ಯಾಣಿ ನಿರ್ಮಿಸಿ ನೀರಿನ ಸಂರಕ್ಷಣೆಗೆ ಆದ್ಯತೆ ನೀಡಿದರು ಎಂದು ಸ್ಮರಿಸಿದರು.

ವಿವಿಧ ವೃತ್ತಿಗಳ ಜನರಿಗೆ ಪ್ರತ್ಯೇಕ ಪೇಟೆ ನಿರ್ಮಿಸುವ ಮೂಲಕ ಉದ್ಯೋಗಾಧಾರಿತ ನಗರಾಭಿವೃದ್ಧಿಯ ಪರಿಕಲ್ಪನೆ ಜಾರಿಗೊಳಿಸಿದರು. ಅವರ ಜೀವನ ಚರಿತ್ರೆ ಮುಂದಿನ ಪೀಳಿಗೆಗೆ ದಾರಿದೀಪವಾಗಲಿದೆ ಎಂದು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕ ಎನ್. ಎಸ್. ಗಂಗರಾಜು ಅವರು ಕೆಂಪೇಗೌಡರ ಜೀವನ, ಆಡಳಿತ, ಇತಿಹಾಸ ಹಾಗೂ ನಗರಾಭಿವೃದ್ಧಿಗೆ ಅವರು ನೀಡಿದ ಕೊಡುಗೆಗಳ ಕುರಿತು ಸವಿಸ್ತಾರ ಉಪನ್ಯಾಸ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ, ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಎಚ್.ಎಲ್. ಮಲ್ಲೇಶಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘುಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕ ತಾರಾನಾಥ್ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಮುಖಂಡರು, ಅಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.



### 2027ಕ್ಕೆ ಕೆಂಪೇಗೌಡ ಪುತ್ಥಳಿ ಅನಾವರಣ

ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಪಿ.ಸ್ವರೂಪ್ ಮಾತನಾಡಿ, ಜಿಲ್ಲೆಯಲ್ಲಿ ನಾಡಪ್ರಭು ಕೆಂಪೇಗೌಡರ ಪುತ್ಥಳಿ ನಿರ್ಮಾಣಕ್ಕೆ ಈಗಾಗಲೇ ಶ್ರೀ ಶಂಭುನಾಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಸಭೆ ನಡೆಸಲಾಗಿದೆ. ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ಎಲ್ಲಾ ಸಮಾಜದ ಮುಖಂಡರನ್ನು ಒಳಗೊಂಡ ಸಮಿತಿ ರಚಿಸಲಾಗುವುದು. ಪುತ್ಥಳಿಯ ನಿರ್ಮಾಣ ಕಾರ್ಯಕ್ಕೆ ಮುಂಗಡ ಹಣ ಪಾವತಿಸಲಾಗಿದ್ದು, ನಗರದ ಬಸ್ ನಿಲ್ದಾಣದ ಉದ್ಯಾನವನದ ಸಮೀಪ ಪ್ರತಿಷ್ಠಾಪಿಸಲಾಗುವುದು. ಮುಂದಿನ ವರ್ಷದ ಕೆಂಪೇಗೌಡ ಜಯಂತಿಯಂದು ಪುತ್ಥಳಿ ಅನಾವರಣಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಜಾತ್ಯಾತೀತವಾಗಿ ಎಲ್ಲ ಸಮಾಜದವರನ್ನು ಒಂದೇ ವೇದಿಕೆಗೆ ಕರೆತಂದು ಜಯಂತಿ ಆಚರಿಸಿರುವುದು ಸಂತಸದ ಸಂಗತಿ. ಕೆಂಪೇಗೌಡರ ತ್ಯಾಗ, ಧೈರ್ಯ, ರಾಷ್ಟ್ರ ನಿರ್ಮಾಣದ ದೃಷ್ಟಿಕೋನ ಪ್ರತಿಯೊಬ್ಬರಿಗೂ ಸ್ಫೂರ್ತಿ ಎಂದು ಹೇಳಿದರು. ಒಕ್ಕಲಿಗ ಸಮಾಜದ ಮಾಜಿ ಪ್ರಧಾನಿ ದೇವೇಗೌಡರು ದೇಶದ ಅತ್ಯುನ್ನತ ಹುದ್ದೆ ಅಲಂಕರಿಸಿ ಕೆಂಪುಕೋಟೆಯಲ್ಲಿ ಧ್ವಜಾರೋಹಣ ಮಾಡಿದ ಹೆಮ್ಮೆ ರಾಜ್ಯಕ್ಕಿದೆ. ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸೇರಿದಂತೆ ಅನೇಕ ನಾಯಕರು ರಾಜ್ಯದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

### ಗಮನ ಸೆಳೆದ ಆಕರ್ಷಕ ಮೆರವಣಿಗೆ

ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ನಗರದಲ್ಲಿ ನಡೆದ ಮೆರವಣಿಗೆ ಎಲ್ಲರ ಗಮನ ಸೆಳೆಯಿತು.

ಜಿಲ್ಲಾಧಿಕಾರಿ ಕಚೇರಿ ಎದುರು ನಾಡಪ್ರಭು ಕೆಂಪೇಗೌಡರ ಪುತ್ಥಳಿ ಹಾಗೂ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ನಂತರ ಹತ್ತಾರು ಕಲಾತಂಡಗಳ ಮೆರುಗಿನೊಂದಿಗೆ ಸಂಭ್ರಮ, ಸಡಗರ ಹಾಗೂ ಸಾಂಸ್ಕೃತಿಕ ವೈಭವದೊಂದಿಗೆ ಅದ್ದೂರಿ ಮೆರವಣಿಗೆ ಶುರುವಾಯಿತು.

ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ಆರಂಭವಾದ ಭವ್ಯ ಮೆರವಣಿಗೆಗೆ ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹಾಗೂ ಇತರರು ಡಮರುಗ ಬಾರಿಸುವ ಮೂಲಕ ಶುಭ ಚಾಲನೆ ನೀಡಿದರು.

ಬಳಿಕ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಸಾಗಿದ್ದು, ಸಾರ್ವಜನಿಕರ ಗಮನ ಸೆಳೆಯಿತು.

ಚಂಡೆ ವಾದ್ಯ, ಡೊಳ್ಳು ಕುಣಿತ, ಪೂಜಾ ಕುಣಿತ, ನಂದಿಧ್ವಜ ಕುಣಿತ ಹಾಗೂ ಗೊಂಬೆ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಆಕರ್ಷಕ ಪ್ರದರ್ಶನಗಳ ಮೂಲಕ ಸಂಭ್ರಮ ಮತ್ತಷ್ಟು ಹೆಚ್ಚಿಸಿದವು.

ಇದೇ ವೇಳೆ ಕೆಂಪೇಗೌಡ ಜಯಂತಿ ಅಂಗವಾಗಿ ಮೆರವಣಿಗೆಯಲ್ಲಿ ಅಳವಡಿಸಿದ್ದ ಅಬ್ಬರದ ಡಿಜೆ ಸಂಗೀತಕ್ಕೆ ವಿದ್ಯಾರ್ಥಿಗಳು ಹಾಗೂ ಯುವಕ-ಯುವತಿಯರು ಉತ್ಸಾಹದಿಂದ ಹೆಜ್ಜೆ ಹಾಕಿ, ಕುಣಿದು ಕುಪ್ಪಳಿಸುವ ಮೂಲಕ ಸಂಭ್ರಮಿಸಿದರು. ಮೆರವಣಿಗೆಯುದ್ದಕ್ಕೂ ಕೆಂಪೇಗೌಡರ ಪರ ಜಯಘೋಷ ಮೊಳಗಿದವು.





# ಕೆಂಪೇಗೌಡರ ಆದರ್ಶಗಳು ಇಂದಿನ ಪೀಳಿಗೆಗೆ ದಾರಿ ದೀಪ

## ಶಾಸಕ ಸಿಮೆಂಟ್ ಮಂಜು ಬಣ್ಣನೆ | ತಾಲೂಕು ಆಡಳಿತದಿಂದ ಜಯಂತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯ ಆಡಳಿತ, ಜನಪರ ಚಿಂತನೆ ಹಾಗೂ ಅಭಿವೃದ್ಧಿ ಪರಿಕಲ್ಪನೆಗಳು ಇಂದಿನ ಪೀಳಿಗೆಗೆ ದಾರಿದೀಪವಾಗಿದ್ದು, ಪ್ರತಿಯೊಬ್ಬ ಜನಪ್ರತಿನಿಧಿಯೂ ಅವರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ ನಾಡಪ್ರಭು ಶ್ರೀ ಕೆಂಪೇಗೌಡರ 517ನೇ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಇಂದು ಬೆಂಗಳೂರು ವಿಶ್ವದ ಮಟ್ಟದಲ್ಲಿ ಐಟಿ ಹಾಗೂ ಸಾಫ್ಟ್‌ವೇರ್ ನಗರವಾಗಿ ಗುರುತಿಸಿಕೊಂಡಿದ್ದರೆ, ಅದರ ಭದ್ರ ಅಡಿಪಾಯವನ್ನು ಶತಮಾನಗಳ ಹಿಂದೆಯೇ ಕೆಂಪೇಗೌಡರು ಹಾಕಿಕೊಟ್ಟಿದ್ದಾರೆ. ಅಧಿಕಾರ ಮತ್ತು ಹುದ್ದೆಗಳು ಶಾಶ್ವತವಲ್ಲ. ಆದರೆ ಜನಪರವಾಗಿ ಮಾಡಿದ ಅಭಿವೃದ್ಧಿ ಕಾರ್ಯಗಳು ಮಾತ್ರ ಶಾಶ್ವತವಾಗಿ ಉಳಿಯುತ್ತವೆ. ಶಾಸಕರಾಗಿ ಎಲ್ಲರ ಸಲಹೆ-ಸಹಕಾರ ಪಡೆದು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇನೆ. ಸಾರ್ವಜನಿಕರ ಸಹಕಾರದೊಂದಿಗೆ ಸಕಲೇಶಪುರ ತಾಲೂಕಿನ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಕೆಂಪೇಗೌಡರು ತೋರಿದ ಅಭಿವೃದ್ಧಿಯ ಹಾದಿಯಲ್ಲೇ ನಾವು ಸಾಗಬೇಕು ಎಂದು ಹೇಳಿದರು.

ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಹೆಚ್. ಎಂ. ವಿಶ್ವನಾಥ್ ಮಾತನಾಡಿ, ಕೆಂಪೇಗೌಡ ಜಯಂತಿ ಕೇವಲ ಆಚರಣೆಗೆ ಸೀಮಿತವಾಗದೆ, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪದ ದಿನವಾಗಬೇಕು. ಎಲ್ಲ ವರ್ಗದ ಜನರನ್ನು ಸಮಾನವಾಗಿ ಕಂಡು ಜನಪರ ಆಡಳಿತ ನಡೆಸಿದ ಮಹಾನ್ ನಾಯಕ ಕೆಂಪೇಗೌಡರು. ಬೆಂಗಳೂರು ನಿರ್ಮಾಣದ ಮೂಲಕ ತಮ್ಮ ದೂರದೃಷ್ಟಿ ಹಾಗೂ ಆಡಳಿತ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ. ಇಂದಿನ ಜನಪ್ರತಿನಿಧಿಗಳು ಅವರ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಸಂಘದ ವತಿಯಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ 25 ವಿದ್ಯಾರ್ಥಿಗಳಿಗೆ ಉಚಿತ ವಸತಿ ಸೌಲಭ್ಯ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ ಮಾತನಾಡಿ, ಮಹಾಪುರುಷರ ಜಯಂತಿಗಳನ್ನು ಆಚರಿಸುವ ಉದ್ದೇಶ ಕೇವಲ ಅವರನ್ನು ಸ್ಮರಿಸುವುದಲ್ಲ. ಅವರ ಆದರ್ಶಗಳು ಹಾಗೂ ಚಿಂತನೆಗಳನ್ನು ಸಮಾಜದಲ್ಲಿ ಅಳವಡಿಸಿಕೊಳ್ಳುವುದಾಗಿದೆ. ಯಾವುದೇ ಆಧುನಿಕ ತಂತ್ರಜ್ಞಾನವಿಲ್ಲದ ಕಾಲದಲ್ಲಿಯೇ ಕೆಂಪೇಗೌಡರು ದೂರದೃಷ್ಟಿಯಿಂದ ಬೆಂಗಳೂರು ನಿರ್ಮಿಸಿದ್ದು ಇಂದಿಗೂ ಪ್ರೇರಣೆಯಾಗಿದೆ ಎಂದು ಹೇಳಿದರು.



**ಯೋಜಿತ ನಗರದ ನಿರ್ಮಾತೃ**

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮುರುಳಿ ಮೋಹನ್ ಮಾತನಾಡಿ, ಕೆಂಪೇಗೌಡರು ದೂರದೃಷ್ಟಿಯುಳ್ಳ ಧೀಮಂತ ನಾಯಕರು. ಅವರು ನಿರ್ಮಿಸಿದ ಬೆಂಗಳೂರು ಇಂದು ಕೋಟ್ಯಂತರ ಜನರ ಬದುಕಿನ ಆಧಾರವಾಗಿದೆ. ಅವರು ನಿರ್ಮಿಸಿದ ದೇವಸ್ಥಾನಗಳು, ರಸ್ತೆಗಳು ಹಾಗೂ ಮೂಲಸೌಕರ್ಯಗಳು ಇಂದಿಗೂ ಮಾದರಿಯಾಗಿವೆ. ಅವರ ಆದರ್ಶಗಳನ್ನು ಅನುಸರಿಸಿ ಸಮಾಜದ ಒಳಿತಿಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಹೇಳಿದರು.

ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾತನಾಡಿ, ನಾಡಪ್ರಭು ಕೆಂಪೇಗೌಡರು ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಸಾಧನೆ ಮಾಡಿದ್ದಾರೆ. ಟಕುಳಿತು ಕುಣಿಗಲ್, ನಿಂತು ಮಾಗಡಿ ಗೆದ್ದವರು, ಮಾತನಾಡುತ್ತಾ ನಾಡನ್ನೇ ಗೆದ್ದವರುಟ ಎಂಬ ಮಾತು ಅವರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಎಲ್ಲರನ್ನು ಸಮಾನವಾಗಿ ಕಾಣುವ ಆಡಳಿತವನ್ನು ಅವರು ನೀಡಿದರು ಎಂದರು.

ಸುಮಾರು 500 ವರ್ಷಗಳ ಹಿಂದೆಯೇ 64 ಕುಲಕಸುಬುಗಳ ಜನರಿಗೆ ಪ್ರತ್ಯೇಕ ಪೇಟೆಗಳನ್ನು ನಿರ್ಮಿಸುವ ದೂರದೃಷ್ಟಿಯನ್ನು ಹೊಂದಿದ್ದರು. ಬೆಂಗಳೂರು ಕೇವಲ ನಗರವಲ್ಲ, ಜನಜೀವನಕ್ಕೆ ಅಗತ್ಯವಿರುವ ಎಲ್ಲಾ ಮೂಲಸೌಕರ್ಯಗಳನ್ನು ಒಳಗೊಂಡ ಯೋಜಿತ ನಗರವಾಗಿತ್ತು. ಅವರ ಆದರ್ಶಗಳು ಇಂದಿಗೂ ನಮಗೆ ಮಾರ್ಗದರ್ಶನ ನೀಡುತ್ತಿವೆ ಎಂದು ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಟೋಲ್‌ಗೇಟ್ ಸಮೀಪದ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ಸಲ್ಲಿಸಿದರು. ಬಳಿಕ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಒಕ್ಕಲಿಗ ಸಮುದಾಯದವರು ಡೊಳ್ಳು ಹಾಗೂ ಡಿಜೆ ಸಂಗೀತದೊಂದಿಗೆ ಕೆಂಪೇಗೌಡರ ಭಾವಚಿತ್ರದ ಭವ್ಯ ಮೆರವಣಿಗೆಯನ್ನು ಹಳೆ ಬಸ್ ನಿಲ್ದಾಣದವರೆಗೆ ನಡೆಸಿ, ಅಲ್ಲಿಂದ ಒಕ್ಕಲಿಗರ ಸಮುದಾಯ ಭವನಕ್ಕೆ ಆಗಮಿಸಿದರು.

ತಹಶೀಲ್ದಾರ್ ಕೆ.ಎಸ್. ಸುಪ್ರೀತಾ, ಸಕಲೇಶಪುರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸೈಯದ್ ಮುಫೀಜ್, ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರ್, ಜೆಡಿಎಸ್ ತಾಲೂಕು ಅಧ್ಯಕ್ಷ ದೊಡ್ಡದಿಣ್ಣೆ ಸ್ವಾಮಿಗೌಡ, ಬಿಜೆಪಿ ತಾಲೂಕು ಅಧ್ಯಕ್ಷ ಅಶ್ವಥ್ ವಳಲಹಳ್ಳಿ, ಕಾಂಗ್ರೆಸ್ ತಾಲೂಕು ಅಧ್ಯಕ್ಷ ಬಿ.ಎನ್. ರಾಮಚಂದ್ರ (ಬೈರುಮಡಿ ಚಂದ್ರು), ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಬೆಂಗಳೂರು ನಿರ್ಮಾಣದಲ್ಲಿ ಕೆಂಪೇಗೌಡರ ಕೊಡುಗೆ ಅಧಿಕ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಬೆಂಗಳೂರು ಸಿಲಿಕಾನ್ ಸಿಟಿಯಾಗಿ ವಿಶ್ವವೇ ತಿರುಗಿ ನೋಡುವಂತೆ ಬೆಳೆದಿದೆ ಎಂದರೆ ಅದಕ್ಕೆ ನಾಡಪ್ರಭು ಕೆಂಪೇಗೌಡರು ಕಾರಣ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಘಟಕದಲ್ಲಿ ಶನಿವಾರ ನಡೆದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರು ನಗರವನ್ನು ವ್ಯವಸ್ಥಿತವಾಗಿ ನಿರ್ಮಿಸುವಲ್ಲಿ ಕೆಂಪೇಗೌಡರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದರು.

ಅಂದು ಅವರು ನಿರ್ಮಿಸಿದ ಬೆಂಗಳೂರು ನಗರ ಇಂದು ಬೃಹದಾಕಾರವಾಗಿ ಬೆಳೆದು ವಿಶ್ವ ಭೂಪಟದಲ್ಲಿ ಗುರುತಿಸಿಕೊಂಡಿದೆ. ಬೆಂಗಳೂರು ನಗರ ನಿರ್ಮಿಸಿದ ಕೆಂಪೇಗೌಡರ ಹೆಸರನ್ನು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಇಡಲಾಗಿದ್ದು, ಕೆಂಪೇಗೌಡರ 108 ಅಡಿ ಪ್ರತಿಮೆ ಸ್ಥಾಪನೆ ಮಾಡಲಾಗಿದೆ. ಮಣ್ಣಿನ ಕೋಟೆಯಿಂದ ಕಟ್ಟಿದ ಹಳ್ಳಿ ಪ್ರದೇಶವಾಗಿದ್ದ ಬೆಂದಕಾಳೂರನ್ನು ನಗರವಾಗಿ ನಿರ್ಮಿಸಿ ದೇಶ-ವಿದೇಶಿಗರಿಗೆ ಪರಿಚಯಿಸಲಾಗಿದೆ ಎಂದು ತಿಳಿಸಿದರು. ಕೆಂಪೇಗೌಡರ ಶೌರ್ಯ, ಸಾಹಸ, ದೂರದೃಷ್ಟಿಗೆ ಹೆಸರಾಗಿದ್ದು ಬೆಂಗಳೂರು ನಗರವನ್ನು ಜಾತಿ ಆಧಾರಿತವನ್ನಾಗಿ ಮಾಡದೇ ವೃತ್ತಿ ಆಧಾರಿತ ಭೂಮಿಯನ್ನಾಗಿ ಮಾಡಿ ನೂರಾರು ವರ್ಷಗಳ ಹಿಂದೆಯೇ ರಸ್ತೆ ಬದಿಯ ಸಾಲು ಮರಗಳು, ದನ-ಕರು, ಪ್ರಾಣಿ-ಪಕ್ಷಿಗಳು ನೀರು ಕುಡಿಯಲು ನೀರಿನ ತೊಟ್ಟಿ ಹಾಗು ರೈತರ ಅನುಕೂಲಕ್ಕಾಗಿ ಕೆರೆಕಟ್ಟೆಗಳ ನಿರ್ಮಾಣ ಮಾಡಿದ ಗೌಡರು ತಮ್ಮ ಅಧಿಕಾರದಲ್ಲಿ ಜಾತ್ಯಾತೀತ ಮನೋಭಾವನೆಯೊಂದಿಗೆ ಆಳ್ವಿಕೆ ಮಾಡಿದ್ದಾರೆ ಎಂದರು.

ಚನ್ನರಾಯಪಟ್ಟಣದಲ್ಲಿ ಗುರುಭವನದ ಬಳಿ ಇರುವ ಕೆಂಪೇಗೌಡ ವೃತ್ತದಲ್ಲಿ ಮುಂಬರುವ ಕೆಂಪೇಗೌಡ ಜಯಂತಿ ಒಳಗೆ ಅಶ್ವರೂಢ ಕೆಂಪೇಗೌಡರ ಪ್ರತಿಮೆ ಸ್ಥಾಪನೆಗೆ ನಿರ್ಧಾರ ಮಾಡಲಾಗಿದ್ದು, ಜು. 5ರಂದು ನವೋದಯ ವಿದ್ಯಾಸಂಸ್ಥೆಯಲ್ಲಿ ಸಭೆ ಕರೆಯಲಾಗಿದೆ. ಎಲ್ಲಾ ಸಂಘಟನೆಗಳ ಮುಖಂಡರು ಭಾಗವಹಿಸಿ ಸಲಹೆ ಸಹಕಾರ ನೀಡಬೇಕೆಂದರು.

### 1 ಕೋಟಿ ರೂ. ಅನುದಾನಕ್ಕೆ ಮನವಿ

ಚನ್ನರಾಯಪಟ್ಟಣ ಘಟಕದಿಂದ ನಿತ್ಯ 107 ಬಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಅದೇ ರೀತಿ ಬೇರೆ ಜಿಲ್ಲೆಯಿಂದ ಸಾವಿರಕ್ಕೂ ಹೆಚ್ಚು ಬಸ್ ಬಂದು ಹೋಗುತ್ತವೆ. ಪ್ರಯಾಣಿಕರ ಅನುಕೂಲಕ್ಕಾಗಿ ನಿಲ್ದಾಣದಲ್ಲಿ ಕುಡಿಯುವ ನೀರು ಸೌಕರ್ಯ, ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದೆ. ಪ್ರವೇಶ ದ್ವಾರದ ಬಲ ಭಾಗದಲ್ಲಿ ಹೈಮಾಸ್ಟ್ ದೀಪ ಅಳವಳಡಿಸಲಾಗಿದೆ ಎಂದು ತಿಳಿಸಿದರು.

# ಹಾಸನ ಸ್ಪರ್ಧಾ ಕುಟೀರಕ್ಕೆ ಉತ್ತಮ ಸ್ಪಂದನೆ

## ನಿತ್ಯ 200 ವಿದ್ಯಾರ್ಥಿಗಳು ಹಾಜರು | ಮೂಲ ಸೌಕರ್ಯ ಕೊರತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಗರ ಕೇಂದ್ರ ಗ್ರಂಥಾಲಯದಲ್ಲಿ ಪ್ರಾರಂಭಿಸಿರುವ ಸ್ಪರ್ಧಾ ಕುಟೀರಕ್ಕೆ ಸಕಾರಾತ್ಮಕ ಸ್ಪಂದನೆ ವ್ಯಕ್ತವಾಗುತ್ತಿದೆ.

ಗ್ರಾಮೀಣ ಹಾಗೂ ನಗರ ವ್ಯಾಪ್ತಿಯ ವಿದ್ಯಾರ್ಥಿಗಳು ಕಾಲೇಜು ವ್ಯಾಸಂಗ ಮುಗಿಸಿ ಸರ್ಕಾರಿ ನೌಕರಿ ಪಡೆಯುವ ಗುರಿಯೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಾರೆ. ಆದರೆ ಬಡ ವಿದ್ಯಾರ್ಥಿಗಳಿಗೆ ದುಬಾರಿ ಬೆಲೆಯ ಪುಸ್ತಕ ಖರೀದಿಸುವುದು ಕಷ್ಟ. ಆದ್ದರಿಂದಲೇ ಜಿಲ್ಲಾಡಳಿತ ಮುತುವರ್ಜಿ ವಹಿಸಿ ಸ್ಪರ್ಧಾ ಕುಟೀರ ಪ್ರಾರಂಭಿಸಿದೆ. ಮಂಗಳೂರು ಜಿಲ್ಲೆಯಲ್ಲಿ ಪ್ರಾರಂಭವಾದ ಈ ಪ್ರಯೋಗಕ್ಕೆ ಧನಾತ್ಮಕ ಪ್ರತಿಕ್ರಿಯೆ ವ್ಯಕ್ತವಾದ ಬಳಿಕ ಮೈಸೂರು, ಚಿತ್ರದುರ್ಗ, ಹಾಸನದಲ್ಲೂ ಪ್ರಾರಂಭಿಸಲಾಗಿದೆ.

ನಗರದ ಮಹಾವೀರ ವೃತ್ತ ಸಮೀಪದಲ್ಲಿರುವ ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳ ಅಧ್ಯಯನಕ್ಕಾಗಿಯೇ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಸ್ಥಳೀಯ ಸಂಪನ್ಮೂಲ ಬಳಸಿಕೊಂಡಿರುವ ಅಧಿಕಾರಿಗಳು ಓದುಗರಿಗಾಗಿ ಟೇಬಲ್, ಕುರ್ಚಿ, ವಿದ್ಯುತ್ ಹಾಗೂ



ಫ್ಯಾನ್ ವ್ಯವಸ್ಥೆ ಮಾಡಿದ್ದಾರೆ. ಬೆಳಿಗ್ಗೆ 8 ರಿಂದ ರಾತ್ರಿ 8 ಗಂಟೆ ವರೆಗೆ ಅಧ್ಯಯನಕ್ಕೆ ಅವಕಾಶವಿದೆ. ಭಾರೀ ಬೆಲೆಯ ಪುಸ್ತಕಗಳು ಇಲ್ಲಿ ಲಭ್ಯವಿದ್ದು ಆಸಕ್ತರು ತಮ್ಮ ವಿಳಾಸ ದಾಖಲಾತಿ ನೀಡಿ ಪಡೆಯಬಹುದು. ಜೊತೆಗೆ ಓದುವುದಕ್ಕಾಗಿ ಮನೆಗೆ ತೆಗೆದುಕೊಂಡು ಹೋಗಲು ಬಯಸುವವರು ಪುಸ್ತಕದ ಬೆಲೆಯ ಮೂರು ಪಟ್ಟು ಹಣ ಪಾವತಿಸಬೇಕು. ಪುಸ್ತಕ ವಾಪಾಸ್ ನೀಡಿದ ಬಳಿಕ ಕಟ್ಟಿದ ಮೊತ್ತವನ್ನು ವಾಪಾಸ್ ನೀಡಲಾಗುತ್ತದೆ. ನಿತ್ಯ 200 ವಿದ್ಯಾರ್ಥಿಗಳು ಸ್ಪರ್ಧಾ ಕುಟೀರದ ಪ್ರಯೋಜನ ಪಡೆಯುತ್ತಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಎಂದರೆ ತಪಸ್ಸಿನ ಮಾಡಿದಂತೆಯೇ ಎಂಬುದು ಸರ್ವ ವಿದಿತ. ಓದಿನಲ್ಲಿ ತುಂಬಾ ಆಸಕ್ತಿ ಇರುವ, ಸರ್ಕಾರಿ ನೌಕರಿ ಪಡೆಯಲೇಬೇಕೆಂದು ಪಣ ತೊಟ್ಟಿರುವ ಅಭ್ಯರ್ಥಿಗಳಿಗೆ ಸಾಧ್ಯವಾದಷ್ಟು ನೆರವಾಗಬೇಕೆಂದು ಯೋಜನೆ ರೂಪಿಸಿರುವ ಅಧಿಕಾರಿಗಳು ಆಸಕ್ತರಿಗೆ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಇತ್ತೀಚೆಗೆ ಪರೀಕ್ಷೆ ನಡೆಸಿದ್ದು ಅದರಲ್ಲಿ 65 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಅವರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ, ಅತ್ಯುಪಯುಕ್ತ ಪುಸ್ತಕಗಳನ್ನು ನೀಡುವ ಕುರಿತು ಚಿಂತನೆ ನಡೆದಿದೆ. ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಕನಿಷ್ಟ 1 ಸಾವಿರ ಅಭ್ಯರ್ಥಿಗಳಿಗೆ ತರಬೇತಿ ನೀಡುವ ಉದ್ದೇಶ ಹಾಕಿಕೊಂಡಿದ್ದು ಆ ನಿಟ್ಟಿನಲ್ಲಿ ಮೊದಲ ಪ್ರಯತ್ನ ಪ್ರಾರಂಭವಾಗಿದೆ.

ನಗರ ಗ್ರಂಥಾಲಯಕ್ಕೆ ಸರ್ಕಾರದಿಂದ ನೇರವಾಗಿ ಯಾವುದೇ ಅನುದಾನ ಬಾರದೆ ಇರುವುದು ಸಮಸ್ಯೆ ತಂದೊಡ್ಡಿದೆ. ಮಹಾನಗರ ಪಾಲಿಕೆ ನೀಡುವ ಹಣದಿಂದ ಮಾತ್ರ ಮೂಲಸೌಕರ್ಯ ವ್ಯವಸ್ಥೆ ಮಾಡಿಕೊಳ್ಳಬಹುದು. ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ಮೇಯರ್ ಅಧ್ಯಕ್ಷರಾಗಿರುತ್ತಾರೆ. ಸದ್ಯ ಮೇಯರ್ ಇಲ್ಲದೆ ಇರುವುದರಿಂದ ಆಡಳಿತಾಧಿಕಾರಿಗಳಿಂದಲೇ ಎಲ್ಲದಕ್ಕೂ ಅನುಮೋದನೆ ಪಡೆಯಬೇಕು. ಅಧಿಕಾರಿ ಮೈಸೂರಿನಲ್ಲಿರುವುದರಿಂದ ಗ್ರಂಥಾಲಯದ ಸಮಸ್ಯೆಗೆ ಪರಿಹಾರ ಇಲ್ಲವಾಗಿದೆ.

ಜೊತೆಗೆ ಗ್ರಂಥಾಲಯ ನೂತನ ಕಟ್ಟಡ ಕಾಮಗಾರಿ ಪ್ರಾರಂಭವಾಗಿ ವರ್ಷಗಳೇ ಕಳೆದಿದ್ದರೂ ಬಾಕಿ ಅನುದಾನ ಬಿಡುಗಡೆಯಾಗದ ಹಿನ್ನೆಲೆಯಲ್ಲಿ ಕಾಮಗಾರಿ ಅರ್ಧಕ್ಕೆ ನಿಂತಿದೆ. ಇನ್ನು 76 ಲಕ್ಷ ರೂ. ದೊರೆತರೆ ಉಳಿದ ಕೆಲಸ ಮಾಡಬಹುದು. ಅದಕ್ಕಾಗಿ ಗ್ರಂಥಾಲಯ ಅಧಿಕಾರಿಗಳು ಸರ್ಕಾರಕ್ಕೆ ಸರಣಿ ಪ್ರಸ್ತಾವನೆ ಸಲ್ಲಿಸುತ್ತಿದ್ದರೂ ಪ್ರಯೋಜನವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗೆ ಅಧಿಕಾರವಿಲ್ಲ. ಇನ್ನು ಸಿಎಸ್ಆರ್ ನಿಧಿ ದೊರೆಯುತ್ತದೆಯಾದರೂ ಅದು ಸಲಕರಣೆ ಖರೀದಿಗೆ ಹೊರತು ಕಟ್ಟಡ ಕಾಮಗಾರಿ ಕೈಗೊಳ್ಳುವಂತಿಲ್ಲ ಎಂಬ ನಿಯಮವಿದೆ. ಹೀಗಾಗಿ ನೂತನ ಗ್ರಂಥಾಲಯದ ಕನಸು ನನಸಾಗುವ ಸಮಯ ದೂರವಾಗುತ್ತಲೇ ಇದೆ.

# ಎಲೈಟ್ ಶಾಲೆಯಲ್ಲಿ ವಿದ್ಯಾರ್ಥಿ ನಾಯಕರ ಪದಗ್ರಹಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೇಮಾವತಿ ನಗರದಲ್ಲಿರುವ ಎಲೈಟ್ ಶಾಲೆಯಲ್ಲಿ 2026-27ನೇ ಸಾಲಿನ ವಿದ್ಯಾರ್ಥಿ ನಾಯಕರ ಪದಗ್ರಹಣ ಸಮಾರಂಭ ನಡೆಯಿತು.

ಶಾಲೆಯ ಆಡಳಿತ ಮಂಡಳಿ ಕಾರ್ಯದರ್ಶಿ ಹೆಚ್.ಪಿ.ಕಿರಣ್ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲೇ ನಾಯಕತ್ವ ಗುಣ ಬೆಳೆಸಿಕೊಳ್ಳಬೇಕು. ಶಿಸ್ತು, ಸಮಯಪ್ರಜ್ಞೆ, ಭಾಷಾ ಕೌಶಲ, ನಡವಳಿಕೆ ನಮ್ಮನ್ನು ಉನ್ನತ ಮಟ್ಟಕ್ಕೆ ಕರೆದೊಯ್ಯುತ್ತವೆ. ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೆ ವ್ಯಾಸಂಗದಲ್ಲಿ ತೊಡಗಬೇಕೆಂದು ಸಲಹೆ ನೀಡಿದರು.

ಖಜಾಂಚಿ ಸಪ್ನ ಕಿರಣ್ ಮಾತನಾಡಿ, ನಾಯಕರು ಶಾಲೆಯ ಇತರ ವಿದ್ಯಾರ್ಥಿಗಳಿಗೆ ಮಾದರಿಯಾಗಿ ನಡೆದುಕೊಳ್ಳಬೇಕು. ಶಿಸ್ತು ಹಾಗು ನಿಯಮಗಳನ್ನು ಪಾಲಿಸಬೇಕೆಂದು ತಿಳಿಸಿದರು.

ವಿದ್ಯಾರ್ಥಿ ನಾಯಕರಾಗಿ ಆಯ್ಕೆಯಾದ ನಾಯಕಿ ಸಿ.ಕೆ.ಸಾರಿಕಾ ಮತ್ತು ಉಪನಾಯಕ ಜಿ.ಬಿ.ವರುಣ್ ಹೊಣೆ ವಹಿಸಿಕೊಂಡರು.

1ರಿಂದ 10ನೇ ತರಗತಿ ವರೆಗೆ ಆಯ್ಕೆಯಾದ ನಾಯಕರಿಗೆ ಬ್ಯಾಡ್ಜ್‌ಗಳನ್ನು ವಿತರಿಸಿ ಶುಭ ಹಾರೈಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಶಾಲೆಯ ಆಡಳಿತಾಧಿಕಾರಿಗಳು, ಪ್ರಾಂಶುಪಾಲ, ಶಾಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ಪೋಷಕರು ಹಾಜರಿದ್ದರು.

# ಇಂದು ಜಿಲ್ಲಾದ್ಯಂತ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪೋಲಿಯೋ ಮುಕ್ತ ಜಿಲ್ಲೆ ನಿರ್ಮಾಣ ಉದ್ದೇಶದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜೂ. 28ರ ಭಾನುವಾರ ಲಸಿಕಾ ಅಭಿಯಾನ ಹಮ್ಮಿಕೊಂಡಿದೆ.

ಈ ಕಾರ್ಯಕ್ಕಾಗಿ ನಗರ ಭಾಗದಲ್ಲಿ 140 ಹಾಗೂ ಗ್ರಾಮೀಣ ವ್ಯಾಪ್ತಿಯಲ್ಲಿ 732 ಸೇರಿ 872 ಲಸಿಕಾ ಬೂತ್‌ಗಳನ್ನು ತೆರೆಯಲಾಗುತ್ತಿದೆ. 0-5 ವರ್ಷದೊಳಗಿನ ಮಕ್ಕಳಿಗೆ ಈ ಹಿಂದೆ ಎಷ್ಟು ಬಾರಿ ಪಲ್ಸ್ ಪೋಲಿಯೋ ಲಸಿಕೆ ಹಾಕಿಸಿದ್ದರೂ ಜೂ.28ರ ಭಾನುವಾರ ನಡೆಯುವ ಅಭಿಯಾನದಲ್ಲೂ ಎರಡು ಹನಿ ಲಸಿಕೆ ಹಾಕಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್ ಕೋರಿದ್ದಾರೆ.

ಎರಡು ಹನಿ-ಪೋಲಿಯೋ ವಿರುದ್ಧ ನಿರಂತರ ಗೆಲುವು ಎಂಬ ಘೋಷವಾಕ್ಯದೊಂದಿಗೆ ಈ ವರ್ಷದ ಅಭಿಯಾನ ಕೈಗೆತ್ತಿಕೊಳ್ಳಲಾಗಿದೆ. ಜಿಲ್ಲೆಯ 1,05,536 ಮಕ್ಕಳಿಗೆ ಹನಿ ನೀಡಲಾಗುವುದು. ಲಸಿಕಾ ಅಭಿಯಾನದಲ್ಲಿ ಪಾಲ್ಗೊಳ್ಳಲು ಬೂತ್‌ವಾರು ತಂಡ ರಚಿಸಿದ್ದು 4 ಸದಸ್ಯರಿಗೆ ಒಂದರಂತೆ 3488 ತಂಡ ರಚಿಸಲಾಗಿದೆ. ತಲಾ ಇಬ್ಬರಂತೆ 1744 ತಂಡ ರಚಿಸಿದ್ದು ಅವರು ಮನೆ ಮನೆ ಭೇಟಿ ನೀಡಿ ಲಸಿಕೆ ನೀಡಲಿದ್ದಾರೆ. 179 ಮೇಲ್ವಿಚಾರಕರು (5 ಬೂತ್



ಗಳಿಗೆ ಒಬ್ಬರಂತೆ) ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ನೇಮಿಸಲಾಗಿದೆ.

ತಾಲ್ಲೂಕುವಾರು ಪಲ್ಸ್ ಪೋಲಿಯೋ ಸೂಕ್ಷ್ಮ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ. ಲಸಿಕಾ ಕಾರ್ಯಕ್ರಮವು ಗ್ರಾಮೀಣ ಪ್ರದೇಶದಲ್ಲಿ 3 ಹಾಗೂ ನಗರ ಪ್ರದೇಶದಲ್ಲಿ 4 ದಿನ ನಡೆಯುತ್ತದೆ.

ಪ್ರತಿ ತಾಲ್ಲೂಕಿಗೆ ಒಂದು ಮೊಬೈಲ್ ಟೀಂ (ಸಂಚಾರಿ ತಂಡ) ರಚಿಸಲಾಗಿದೆ. ಒಟ್ಟು 20 Transit Points ಗಳನ್ನು ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ದೇವಸ್ಥಾನ, ರಿಂಗ್ ರಸ್ತೆ, ಟೋಲ್ ಗೇಟ್‌ಗಳಲ್ಲಿ ಸ್ಥಾಪಿಸಲಾಗಿದ್ದು 0-5 ವರ್ಷದ ಮಕ್ಕಳನ್ನು ಗುರುತಿಸಿ ಪೋಲಿಯೋ ಹನಿಯನ್ನು ನೀಡಲು ಕ್ರಮ ವಹಿಸಲಾಗಿದೆ.

ಮೊದಲ ಸುತ್ತಿನಲ್ಲಿ ಒಟ್ಟು 3488 ವ್ಯಾಕ್ಸಿನೇಟರ್ ಮತ್ತು 179 ಮೇಲ್ವಿಚಾರಕರನ್ನು ಗುರುತಿಸಿ ಸೂಕ್ತ ತರಬೇತಿ ನೀಡಲಾಗಿದೆ. 1,05,536 ಮಕ್ಕಳಿಗೆ 134951 ಡೋಸ್ ಅಂದರೆ 6715 ವಾಯಿಲ್‌ಗಳು ಬೇಕಾಗಿದ್ದು, ಜಿಲ್ಲೆಗೆ 151900 ಡೋಸ್ ಅಂದರೆ 7595 ವಾಯಿಲ್ ಲಸಿಕೆ ಹಾಗೂ 2000 ಮಾರ್ಕರ್ ಪೆನ್‌ಗಳು ರಾಜ್ಯ ಸರ್ಕಾರದಿಂದ ಪೂರೈಕೆಯಾಗಿದೆ. ಪಲ್ಸ್ ಪೋಲಿಯೋ ಲಸಿಕೆಯನ್ನು ಜಿಲ್ಲಾ ಲಸಿಕಾ ಉಗ್ರಾಣದಿಂದ ಸಂಬಂಧಪಟ್ಟ ಆರೋಗ್ಯ ಸಂಸ್ಥೆಗಳಿಗೆ ರವಾನಿಸಲಾಗಿದ್ದು, ಈ ಕಾರ್ಯಕ್ರಮಕ್ಕೆ ಅವಶ್ಯವಿರುವ Vaccine Carrier, Cold Box, ILR, Deep Freezer Ice Pack ಗಳಿಗೆ ಪೂರ್ಣ ಸಿದ್ಧತೆ ಮಾಡಿಕೊಳ್ಳಲಾಗಿದೆ.

ತಾಲ್ಲೂಕುವಾರು ಮಕ್ಕಳ ಸಂಖ್ಯೆ: ಆಲೂರಿನಲ್ಲಿ 5,165, ಅರಕಲಗೂಡು 10,771, ಅರಸೀಕೆರೆ 17,571, ಬೇಲೂರು 10,452, ಚನ್ನರಾಯಪಟ್ಟಣದಲ್ಲಿ 14,190, ಹಾಸನ ತಾಲ್ಲೂಕಿನಲ್ಲಿ 11,188, ಹೊಳೆನರಸೀಪುರ 11,188, ಸಕಲೇಶಪುರ ತಾಲ್ಲೂಕಿನಾದ್ಯಂತ 7,262 ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಗುರಿ ಹಾಕಿಕೊಳ್ಳಲಾಗಿದೆ.

# ಹಿರೀಸಾವೆ ಸರ್ಕಾರಿ ಪ್ರೌಢಶಾಲೆಯಲ್ಲಿ ಗುರುವಂದನೆ ಕಾರ್ಯಕ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಗುರುಗಳಿಗೆ ಗೌರವಿಸುವುದರ ಜೊತೆಗೆ ತಾವು ಓದಿದ ಶಾಲೆಯ ಅಭಿವೃದ್ಧಿಗೂ ಹಿರಿಯ ವಿದ್ಯಾರ್ಥಿಗಳು ಗಮನ ಹರಿಸಬೇಕೆಂದು ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎನ್.ಆರ್.ಮರುಳಾರಾಧ್ಯ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಸರ್ಕಾರಿ ಪ್ರೌಢಶಾಲೆಯಲ್ಲಿ 2006-07ನೇ ಸಾಲಿನ ವಿದ್ಯಾರ್ಥಿಗಳು ಏರ್ಪಡಿಸಿದ್ದ ಗುರುವಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,

ವಿದ್ಯೆ ಕಲಿಸಿದ ಶಿಕ್ಷಕರಿಗೆ ಗೌರವ ಸಲ್ಲಿಸುವುದು ನಮ್ಮ ಸಂಸ್ಕೃತಿ. ಹಲವು ವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ಆಶ್ರಯ ನೀಡಿ, ಉತ್ತಮ ಜೀವನ ರೂಪಿಸಿದ ಶಾಲೆಯನ್ನು ಮರೆಯಬಾರದು. ಈಗಾಗಲೇ ಹಲವು ಕಡೆ ಹಿರಿಯ ವಿದ್ಯಾರ್ಥಿಗಳು ಶಾಲೆ ಅಭಿವೃದ್ಧಿಗೆ ವಿವಿಧ ಕಾರ್ಯಕ್ರಮ ರೂಪಿಸಿದ್ದಾರೆ. ಇಂದಿನ ಶಿಕ್ಷಣಕ್ಕೆ ಬೇಕಾದ ಆಧುನಿಕ ತಂತ್ರಜ್ಞಾನದ ಸೌಲಭ್ಯಗಳನ್ನು ಕೊಡುಗೆಯಾಗಿ ನೀಡಿ ಎಂದರು.

200607ನೇ ಸಾಲಿನಲ್ಲಿ ಈ ಶಾಲೆಯಲ್ಲಿ ಭೋಧನೆ ಮಾಡಿದ ಶಿಕ್ಷಕರಾದ ಪ್ರಕಾಶ್, ನಿರ್ಮಲ ಕುಮಾರಿ, ಕರಿಬಸಪ್ಪ, ರಾಮಕೃಷ್ಣ ಅವರಿಗೆ ಅಭಿನಂದಿಸಲಾಯಿತು. ಹಿರೀಸಾವೆ ಠಾಣೆಯ ಪಿಎಸ್ಐ ರೂಪಾದೇವಿ ಬಿರಾದರ್ ಅವರು ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಸಾಪ ಹೋಬಳಿ ಘಟಕದ ಅಧ್ಯಕ್ಷ ಪ್ರಮೋದ್, ಮುಖ್ಯ ಶಿಕ್ಷಕ ಅಶೋಕ್, ಸಹಶಿಕ್ಷಕರಾದ ಪಾರ್ವತಮ್ಮ, ಜ್ಯೋತಿ ಮೈಮ್, ಅನಿತಾ, ಉಪನ್ಯಾಸಕಿ ಶಶಿಕುಮಾರಿ ಇದ್ದರು.

ಹಿರಿಯ ವಿದ್ಯಾರ್ಥಿಗಳಾದ ಗಂಗಾಧರ್, ಪುನೀತ್, ನಂದೀಶ್, ಸಲ್ಮಾನ್ ಅವರು ತಮ್ಮ ವಿದ್ಯಾರ್ಥಿ ಜೀವನದ ಅನುಭವ ಹಂಚಿಕೊಂಡರು.

# ಇತಿಹಾಸದಲ್ಲಿ ಈ ದಿನ

## ಜೂನ್-28

1914: ಆಸ್ಟ್ರಿಯಾ ಯುವರಾಜ ಫ್ರಾಂಜ್ ಫರ್ಡಿನಾಂಡ್ ಮತ್ತು ಅವರ ಪತ್ನಿ ಸೋಫಿ ಅವರನ್ನು ಸಾರಾಜೇವೊದಲ್ಲಿ ಹತ್ಯೆ ಮಾಡಲಾಯಿತು. ಈ ಘಟನೆ ಪ್ರಥಮ ವಿಶ್ವಯುದ್ಧಕ್ಕೆ ನಾಂದಿ ಹಾಡಿತು. 1919: ವರ್ಸೈಲ್ಸ್ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಒಪ್ಪಂದವು ಪ್ರಥಮ ವಿಶ್ವಯುದ್ಧದ ಅಂತ್ಯವನ್ನು ಅಧಿಕೃತವಾಗಿ ಘೋಷಿಸಿತು.

1972: ಭಾರತದಲ್ಲಿ ವನ್ಯಜೀವಿಗಳ ಸಂರಕ್ಷಣೆಗಾಗಿ ವನ್ಯಜೀವಿ ಸಂರಕ್ಷಣಾ ಕಾಯ್ದೆ-1972 ಜಾರಿಗೊಂಡಿತು.

2004: ಇರಾಕ್‌ನಲ್ಲಿ ಅಮೆರಿಕ ನೇತೃತ್ವದ ಒಕ್ಕೂಟ ಸರ್ಕಾರದಿಂದ ಆಡಳಿತಾಧಿಕಾರವನ್ನು ಇರಾಕಿನ ಮಧ್ಯಂತರ ಸರ್ಕಾರಕ್ಕೆ ಹಸ್ತಾಂತರಿಸಲಾಯಿತು.

ಜನನ

1921: ಭಾರತದ ಮಾಜಿ ಪ್ರಧಾನಮಂತ್ರಿ, ಪಿ.ವಿ.ನರಸಿಂಹ ರಾವ್


# ನಾನು.....! ಮೋಹಿನಿ ಗಂಡಾ, ಮೋಹನಾ-4

**ಧನಂಜಯ ಜೀವಾಳ ಬಿ.ಕೆ.**

ಇಲ್ಲಿ ನಾ ಏರಿದ್ದ ಬಸ್ಸಿನೊಳಗೆ ಯಾರೋ ಒಬ್ಬ ಅಸಾಮಿ ಒಂದು ರೂಪಾಯಿಗೆ ಹದಿನೈದು ಮೀನಿನಂತೆ ಅಗ್ಗವಾಗಿ ಸಿಕ್ಕಿತೆಂದು ಸಂತೆಯಲ್ಲಿ ಕೊಂಡಿದ್ದ ಭೂತಾಯಿ ಮೀನನ್ನು ಪ್ಲಾಸ್ಟಿಕ್ ವೈರ್ ಚೀಲದಲ್ಲಿ ಹಾಕಿಕೊಂಡು ಅದನ್ನಿಡಲು ಜಾಗವಿಲ್ಲದೇ ಪ್ರಯಾಣಿಕರು ನೇತಾಡಲು ಜೋತು ಬಿಟ್ಟಿರುವ ಹಿಡಿಕೆಯನ್ನು ಹಿಡಿದುಕೊಂಡಿರುವ ಕೈಯಲ್ಲೇ ಹಿಡಿದುಕೊಂಡಿದ್ದಾನೆ. ಅದರೊಳಗಿಂದ ಜಿನುಗುವ ಮೀನಿನ ಅಸಹ್ಯ ಭರಿತ ರಸ; ಚೀಲ ಜೋತಾಡುತ್ತಾ, ತೂಗಾಡುತ್ತಿದ್ದಂತೆ ಕುಳಿತಿದ್ದವರ, ನಿಂತಿದ್ದವರ ಮೈಮೇಲೆ, ಬಟ್ಟೆ ಮೇಲೆ, ತಟ್ ತಟ್ಟೆಂದು ಬೀಳುತ್ತಿತ್ತು. ಹೈಸ್ಕೂಲು ಹುಡುಗಿಯೊಬ್ಬಳ ಯೂನಿಫಾರಂನ ಜಾಕೆಟ್ ಮೀನಿನ ರಸದಿಂದ ತೋಯ್ದು ಘಮ್ಮೆನ್ನಲಾರಂಭಿಸಿತು. ಪಕ್ಕದ ಸೀಟಿನಲ್ಲಿ ಕುಳಿತಿದ್ದ ಕಪ್ಪು ಕೋಟಿನ, ಕಪ್ಪು ಟೋಪಿಯ ತೋಟಾದ ಕರೀಗೌಡರು ಈ ಅಸಾಮಿಗೆ ಗದರಲು ಬಾಯಿ ತೆರೆಯುತ್ತಿದ್ದಂತೆ ಅವರ ಮೂಗು ಮತ್ತು ಬಾಯಿಯ ನಡುವಿನ ಜಾಗಕ್ಕೇ ಲಥ್ ಎಂದು ಮೀನಿನ ರಸ ಮೆತ್ತಿಕೊಳ್ಳಬೇಕೇ? ಗಬ್ಲು ಶನಿ ಮುಂಡೆಮಗ್ನೇ, ಮೀನ್‌ಸಾರು ತಿನ್ಬೇಕು ಅಂತಾ ನಮಗೆಲ್ಲಾ ಪನ್ನೀರ್ ಇಡ್ತಾ ಇದಿಯಾ? ರೀ ಕಂಡಕ್ಟ್ರೇ, ಈ ಕಸಗಲು ನನ್ ಮಗನ್ನ ಇಳಿಸ್ತೀರೋ ಇಲ್ಲ ನಾವೇ ಇಳೀಬೇಕೋ? ನಿಲ್ಲಿಸ್ರೀ ಬಸ್! ನಿಲ್ಲಿಸ್ರೀ ಡ್ರೈವರ್ರೇ!!ಟಿಟ ಎಂದು ಗೌಡರು ಭೋರ್ಗರೆಯತೊಡಗಿದರು.

ಆ ದಾರಿಯಲ್ಲಿ ಆ ದಿನಕ್ಕೆ ಅದೇ ಕಡೇ ಬಸ್ಸಾದ್ದರಿಂದ ಈ ಕರೀಗೌಡರೇನೂ ಬಸ್ಸಿನಿಂದ ಇಳಿಯುತ್ತಿರಲಿಲ್ಲ, ಅದು ಬೇರೆ ಪ್ರಶ್ನೆ. ಕಂಡಕ್ಟರ್ ಇನ್ನೂ ಡ್ರೈವರ್ ಹಿಂಭಾಗದಲ್ಲಿ ಟಿಕೇಟ್ ಕೊಡ್ತಾ ಇದ್ದ. ಹ್ಯಾಂಡ್‌ಪೋಸ್ಟ್‌ನಲ್ಲಿ ರೈಸ್‌ಮಿಲ್‌ಗೆ ಬಂದಿದ್ದ ಅನೇಕರು ಅಕ್ಕಿ-ನುಚ್ಚು, ತೌಡು ಮೂಟೆಯೊಂದಿಗೆ ಹಿಂಬದಿಯಲ್ಲಿ ಮಾತ್ರ ಪ್ರವೇಶದ್ವಾರವಿದ್ದ ಬಸ್ಸನ್ನೇರಲು ಪೈಪೋಟಿ ನಡೆಸತೊಡಗಿದರು. ಈ ಬಸ್ ಬಿಟ್ಟರೆ ಆ ದಿನ ಊರಿಗೆ ಹೋಗುವಂತೆಯೇ ಇರಲಿಲ್ಲವಾದ್ದರಿಂದ ಮೂರ್ನಾಲ್ಕು ಜನ ಮೂಟೆಯನ್ನು ಬಸ್‌ನ ಪ್ರವೇಶದ್ವಾರದ ಬಳಿಯೇ ರಸ್ತೆ ಮೇಲಿಟ್ಟು ಬಸ್‌ನ ಮುಂಭಾಗಕ್ಕೆ ಬಂದು ತಮ್ಮನ್ನು, ತಮ್ಮ ಮೂಟೆಯನ್ನು ಹತ್ತಿಸಿಕೊಳ್ಳದೇ ಬಸ್ ಮುಂದಕ್ಕೆ ಹೋಗುವಂತಿಲ್ಲ ಎಂಬಂತೆ ತಡೆಯೊಡ್ಡಿದ್ದರು.

ಇತ್ತ ಬಸ್‌ನೊಳಗೆ ಮೀನಿನ ಅಸಾಮಿ ಏನ್ ಸಾವ್ಕಾರ್ರೇ ನಿಮಗೇನೋ ಸೀಟ್ ಸಿಕ್ಕಿದೆ ಅಂತಾ ರೋಪ್ ಹಾಕ್ತೀರಾ, ನಾನೇನ್ ಪುಗಸ್ಟೆ ಹೋಗ್ತಿಲ್ಲ, ನಾನೂ ಟಿಕೇಟ್ ತಗಾಣದೇಯ ತಿಳ್ಕೀ ಎಂದ. ರೀ ಕಂಡಕ್ಟ್ರೇ, ಇಳಿಸ್ರೀ ಈ ಶನಿಮುಂಡೇಮಗನ್ನ. ಕುಡಿದ್ ಬೇರೆ ಬಂದಿದಾನೆ! ಎಂದರು ಕರೀಗೌಡರು. ಅಷ್ಟರಲ್ಲಿ ಯಾರೋ ಬಸ್ ಹತ್ತಲಿಕ್ಕೆ ಯತ್ನಿಸುತ್ತಾ ಹಿಡಿದುಕೊಳ್ಳಲು ಏನೂ ಸಿಗದೇ ನನ್ನ ಪ್ಯಾಂಟಿನ ಬೆಲ್ಟ್ ಅನ್ನು ಬಲವಾಗಿ ಹಿಡಿದು ಅದರ ಸಪೋರ್ಟ್‌ನಲ್ಲಿ ಬಸ್‌ನೊಳಗೆ ನುಸುಳಲು ಹಲ್ಲುಕಚ್ಚಿ ಪ್ರಯತ್ನಿಸಬೇಕೇ!! ಕೇವಲ ಒಂದೇ ಕೈಯಲ್ಲಿ ಕಂಬಿ ಹಿಡಿದು ಇನ್ನೊಂದು ಕೈಯಲ್ಲಿ ಬ್ಯಾಗಿನೊಂದಿಗೆ ಬ್ಯಾಲೆನ್ಸ್ ಮಾಡ್ತಿದ್ದ ನಾನು ಸಮತೋಲನ ತಪ್ಪಿ ಅರ್ಧಚಂದ್ರಾಕಾರವಾಗಿ ರೌಂಡ್ ಹೊಡೆದೆ. ಬಿಡ್ರೀ, ಯಾರ್ರೀ ಅದು? ಬಿಡ್ರೀಟ ಎಂದರೂ ಆ ಮನುಷ್ಯ ಇನ್ನೂ ಸ್ಟಾರ್ಟಿಂಗ್‌ನಲ್ಲೇ ಇದ್ದ ಈ ಬಸ್ಸನ್ನು ಬಿಟ್ರೆ ಕೆಟ್ಟೆ ಎಂಬಂತೆ ಇನ್ನಾರದೋ ಕೈಯಲ್ಲಿದ್ದ ಬ್ಯಾಗನ್ನೇ ಹಿಡಿದು



ಜಗ್ಗತೊಡಗಿದ. ಫ್ಯಾಕ್ಟಂಫಾಸ್ ಇಪ್ಪತ್ತು ಇಪ್ಪತ್ತು ಸೊನ್ನೆ ಹದಿನೈದು ಎಂಬ ಗೊಬ್ಬರದ ಚೀಲದಿಂದ ಸೂಬರಕ್ಕೆ ಹೊಲಿಸಿದ್ದ ಆ ಚೀಲದ ಹ್ಯಾಂಡಲ್ ಪಠಾರನೆ ಕಿತ್ತುಹೋಗಿ ಬ್ಯಾಗಿನೊಂದಿಗೆ ಆ ಮನುಷ್ಯನೂ ಬಸ್‌ನಿಂದ ಕೆಳಗೆ ಉದುರಿದ.


**ಗ್ರಾಮಾಯಣ**

ಬ್ಯಾಗಿನಲ್ಲಿದ್ದ ಟೊಮ್ಯಾಟೋ, ಈರುಳ್ಳಿ, ಬದನೇಕಾಯಿ, ಬಿಡಿಸೋಕಾಳು, ಮೂಲಂಗಿ, ಕಡ್ಲೆಪುರಿ, ಹೇರ್‌ಪಿನ್, ಭೂತಾಯಿ ಮೀನು, ಮೆಣಸಿನಕಾಯಿ ಬೋಂಡಾ, ನೆಕ್ಕರೆ ಮಾವಿನಹಣ್ಣು, ಹೊಸ ಹವಾಯಿ ಚಪ್ಲಿ ಟಾರು ಕಿತ್ತ ರಸ್ತೆಯಲ್ಲಿ ಚೆಲ್ಲಾಡಿಹೋದವು. ಬ್ಯಾಗಿನ ಯಜಮಾನ ನೋಡ್ತಾನೆ, ಕೈಯಲ್ಲಿ ಬ್ಯಾಗಿಲ್ಲ!! ಕ್ಷುದ್ರನಾಗಿ ತನ್ನ ಗ್ರಾಮೀಣ ಡಿಕ್ಷನರಿಯನ್ನೇ ಓಪನ್ ಮಾಡಿದ. ಕೆಳಗಿಳಿದರೆ ಎಲ್ಲಿ ಮತ್ತೆ ಹತ್ತಲು ಆಗುವುದಿಲ್ಲವೋ ಎಂದು ಎಲ್ಲಾ ತುಂಬಿ ತಂದುಕೊಡ್ತೀಯೋ ಇಲ್ಲಾ ನಿನ್ ತಿಥಿನೇ ಮಾಡ್ತೀನಿ. ಏನ್ ನೋಡ್ತಿದ್ದೀಯ. ತುಂಬ್ಸೋ, ತುಂಬ್ಸು ಎಂದು ಬೊಬ್ಬಿರಿಯತೊಡಗಿದ. ಬಿದ್ದವ್ನು ಕೆಲ್ಸ ಕೆಟ್ಟೋಯ್ತುಲಪ್ಪಾ ಎಂದು ಉರುಳುರುಳಿ ಹೋಗ್ತಿದ್ದ ಈರುಳ್ಳಿಯನ್ನು, ಟೊಮ್ಯಾಟೋವನ್ನು ಹಿಡಿಯಲು ಹೋಗಿ ಎತ್ತಿನ ಗಾಡಿಯೊಂದರಡಿ ಸಿಕ್ಕಾಕಿಕೊಂಡು ಗೋಳಾಡತೊಡಗಿದ. ಈ ಎಲ್ಲಾ ಗೊಂದಲಗಳ ನಡುವೆಯೇ ಬಳೆ ಮಾರುವ ಹೆಂಗಸೊಂದು ಅಣ್ಣಾ, ನಿಮ್ ಕೈಮುಗಿತೀನಣ್ಣಾ ಇದೇ ಲಾಸ್ಟ್ ಬಸ್. ಈಟೇ ಈಟು ಜಾಗ ಕೊಡಣ್ಣಾ ಎಂದು ಬ್ಯಾಗ್ ಕಳೆದುಕೊಂಡು ಕೂಗಾಡುತ್ತಿದ್ದವನನ್ನು ಕೇಳತೊಡಗಿದಳು. ಮೊದಲೇ ತನ್ನ ಬ್ಯಾಗಿನ ರಹಸ್ಯವೆಲ್ಲಾ ಹ್ಯಾಂಡ್ಪೋಸ್ಟಿನಂಥ ಮೂರ್ದಾರಿ ಕೂಡುವಲ್ಲಿ ಜಗಜ್ಜಾಹಿರಾದ್ದರಿಂದ ವ್ಯಗ್ರನಾಗಿದ್ದ ಈ ಮನುಷ್ಯ ನಿನಗೆ ಹತ್ತಕ್ಕೆ ಈ ಬಸ್ಸೇ ಬೇಕಾ? ಎಲ್ಲಾದ್ರೂ ನುಸ್ಕೊಂಡ್ ಸಾಯಿ, ನಾವೇ ಸರ್ಕಸ್ ಮಾಡ್ತಿದ್ದೀವಿ. ಏಯ್ ಎತ್ತೋ ಒಂದೇ ಒಂದು ಸಾಮಾನು ಕಡಿಮೆ ಆಗಿದ್ರೂ ನಿನ್ನ ಇಲ್ಲೇ ಹಾಕಿ ಕುಕ್ಕರಿಸ್ತೀನಿ ಎಂದು ಒಂದೇ ಮಾತಿನಲ್ಲಿ ಇಬ್ಬರನ್ನೂ ಜಾಡಿಸತೊಡಗಿದ.

ಇತ್ತ ಬಸ್‌ನೊಳಗೆ ಭೂತಾಯಿಮೀನಿನ ರಸವತ್ತಾದ ಪರಿಮಳ, ಯಾರೋ ಮುಡಿದಿದ್ದ ಪಾತಾಳಗರುಡ ಕುಡಿಯ ತಲೆನೋವು ತರಿಸುವ ವಾಸನೆ, ಶುಕ್ರವಾರದ ನಮಾಜಿಗೆ ಬಂದಿದ್ದ ಕಾಕಾಗಳ ಅತ್ತರಿನ ಘಮಲು, ಪೋರ್ಕ್ ಬಾಯಮ್ಮನ ಹಂದಿಮಾಂಸದ ಪ್ಯಾಕೆಟ್ಟಿನ ಹಸಿಮಾಂಸ ವಾಸನೆ, ಗದ್ದೆ ಹೂಡಲು ಸಿದ್ದ ಮಾಡಿಸಿಕೊಂಡ ಟಿಲ್ಲರಿನ ಕೇಜ್‌ವ್ಹೀಲಿನ ಗ್ರೀಸ್ ವಾಸನೆ, ಶನಿದೇವರ ಫೋಟೋವನ್ನು ಎದೆ ಮೇಲೆ ತೂಗುಹಾಕಿಕೊಂಡು ಕಾಣಿಕೆಯೆತ್ತುವ ದೇವರ ಏಜೆಂಟ್, ಕೆಂಪು, ನೀಲಿ, ಹಸಿರು ಟೇಪ್‌ಗಳಿಂದ ಜಡೆ ಕಟ್ಟಿದ, ಬಿಳಿ ರವಿಕೆ, ಹೂ ಹೂವಿನ ಲಂಗದ, ಅದೇ ಕೆಂಪು, ನೀಲಿ, ಹಸಿರು ಬಣ್ಣದ ದಾವಣಿಯ ಹದಿನಾರು ಕೆಲಸದ ಹುಡುಗಿಯರು ಕಚಪಚನೆ ಸ್ಥಳೀಯರಿಗೆ ಸುಲಭವಾಗಿ ಅರ್ಥವಾಗದ ಭಾಷೆಯಲ್ಲಿ ತಮ್ಮ ತಮ್ಮಲ್ಲೇ ಭಾರೀ ಹುರುಪಿನಿಂದ ಮಾತನಾಡುತ್ತಿದ್ದರು. ಸ್ಥಳೀಯ ಪ್ಯಾಂಟುಷರ್ಟಿನ ಹುಡುಗರೆದುರು ಹೂಹೂವಿನ ಚಿತ್ರಗಳಿದ್ದ ಲುಂಗಿ ಯನು ಸುತ್ತಿಕೊಂಡು ಕೀಳರಿಮೆಯಿಂದ ನಿಂತಿದ್ದ ಅದೇ ಹದಿನಾರ್ಕೆಲಸದ ಯುವಕರು. ಬೇಕೆಂದೇ ದಾವಣಿಗಳನ್ನು ಒತ್ತಿಕೊಂಡು ನಿಂತು ಆಚೀಚೆ ಹೊಸೆದಾಡುವ ಕಾಲೇಜು ಪಡ್ಡೆಗಳು. ದಾವಣಿಗಳ ರಕ್ಷಣೆಗೆ ಹಾತೊರೆದು ಅಡ್ಡಡ್ಡ ನಿಲ್ಲುವ ಅದೇ ಹದಿನಾರ್ಕೆಲಸದ ಮುದುಕಿಯರು, ಏನಾದರಾಗಲೀ ಪೆಟ್ಟು ಬೀಳದಿದ್ದರೆ ಸಾಕೆಂದು ಎತ್ತಲೋ ನೋಡುವ ಅದೇ ಗುಂಪಿನ ಹಿರಿಯ ಗಂಡಸರು.

ವಾರದ ಹಸುಗೂಸನ್ನೆತ್ತಿಕೊಂಡಿದ್ದ ಹೆಂಗಸು ತನ್ನ ಪಕ್ಕ ಕೂತಿದ್ದ ಟೀಚರಮ್ಮನಿಗೆ ಸರ್ಕಾರಿ ಆಸ್ಪತ್ರೆಯಂತೆ ಆಸ್ಪತ್ರೆ, ಮನುಷ್ಯರಾದವ್ರು ಯಾರಾದ್ರೂ ಇರ್ತಾರಾ ಅಲ್ಲಿ? ಕೆಲ ಡಾಕ್ಟ್ರು ಯಾಕಾದ್ರೂ ಈ ಆಸ್ಪತ್ರೆ ಇದೆಯಪ್ಪಾ ಅಂತ ಬೇಕೋಬೇಡವೋ ಎಂದು ಬರ್ತಾರೆ. ಇನ್ಕೆಲವ್ರನ್ನ ನೋಡಿದ್ರೆ ಇಲ್ಲದಿದ್ದ ಖಾಯಿಲೆ ಹೊಸದಾಗಿ ಬರುತ್ತೆ. ಇನ್ನು ಕೆಲಸಗಾರರೋ ಈ ಕ್ಷಣ ಇಲ್ಲಿದ್ರೆ ಮುಂದಿನ ಕ್ಷಣ ಕ್ಯಾಂಟೀನಿನಲ್ಲಿ ಹರಟೆ ಹೊಡಿತಾಇರ್ತಾರೆ. ಯಾರಾದ್ರೂ ಮಾತಾಡಿಸಿದ್ರೆ ಇದ್ಯಾವ ಉಪದ್ರವಾಂತ ಹುಳವನ್ನ ನೋಡಿದಂಗೆ ನೋಡ್ತಾರೆ ಮಾರಾಯ್ತಿ. ಸರ್ಕಾರಿ ಸಂಬ್ಳಕ್ಕೆ ಕೆಲಸ ಮಾಡಿದ್ರೂ ಏನೋ ಮಹಾ ಉಪಕಾರ ಮಾಡ್ತಿದೀವಿ ಅನ್ನೋ ತರಾ ಆಡ್ತಾರೆ. ಸುಮ್‌ಸುಮ್ನೆ ಯಾವ್ಯಾವುದೋ ಕಾರಣಕ್ಕೆ ಅತ್ತಿಂದಿತ್ತ ಓಡಾಡ್ತಾನೇ ಇರ್ತಾರೆ. ಆ ಗಂಡಹೆಂಡ್ತಿ ಡಾಕ್ಟ್ರಿದ್ರಲ್ಲ, ಅವಾಗ ಎಷ್ಟು ಚೆನ್ನಾಗಿತ್ತು. ಈಗೇನು ರೋಗ ಬಡಿದಿದೆಯೋ ಆ ಆಸ್ಪತ್ರೆಗೆ, ದೇವ್ರಿಗೇ ಗೊತ್ತು. ಇರೋದ್ರಲ್ಲಿ ಕುಳ್ಳಗೆ ಇದಾರಲ್ಲ ಮತ್ತೆ ಎತ್ತರಕ್ಕೆ ಕನ್ನಡ್ಕ ಹಾಕ್ಕಂತಾರಲ್ಲ, ಅವ್ರೇನೋ ಪರ್ವಾಗಿಲ್ಲ. ಇನ್ನು ಕೆಲಸಗಾರ್ರಲ್ಲಿ ಅದೇ ಆಚಾರ್ರು, ಶೆಟ್ರು, ನಾಯಕ್ರು ಇದ್ದದ್ದರಲ್ಲಿ ಆಗಬಹುದು. ಹಿಂಗೇ ಮಾಡಿ ಜನಾ ಬರ್ದಂಗೆ ಮಾಡಿ ಮಾಡಿ, ಇಷ್ಟು ದೊಡ್ಡ ಆಸ್ಪತ್ರೆನ ಯಾರಾದ್ರೂ ಪ್ರೈವೇಟ್‌ನವರಿಗೆ ಮಾರೋ ಅಂದಾಜಿದೆಯೇನೋ ಎಂದಳು.

ಹೂ, ಎಷ್ಟೋ ಸರ್ಕಾರಿ ಸಂಸ್ಥೆಗಳನ್ನ ಸುಮ್ನನೇ ಕೆಲಸಗಾರರನ್ನ ಸಾಕಲಿಕ್ಕೆ ನಡಿಸ್ತಾ ಇದಾರೆ. ಯಾವಾಗ್ಲೂ ಲಾಸ್‌ನಲ್ಲೇ ನಡಿತಿರುತ್ತೆ ಅಥವಾ ನಡೆಸುತ್ತಾ ಇರ್ತಾರೆ. ರೋಗಗ್ರಸ್ತ ಅಂತಾ ತೋರಿಸಿ ಒಂದು ದಿನ ಯಾರೋ ಅವರಿಗೇ ಬೇಕಾದವರಿಗೆ, ಖಾಸಗಿಯವರಿಗೆ ಪುಗ್ಸಟ್ಟೆ ಮಾರಿದಂತೆ ಮಾರಿ ಕೈತೊಳ್ಕೋತಾರೆ. ಅವನು ಕಡಿಮೆ ಕೆಲಸಗಾರರಿಂದಲೇ ಜಾಸ್ತಿ ಉತ್ಪಾದನೆ ಮಾಡಿತೋರಿಸಿ ಲಾಭ ಮಾಡ್ಕೋಳ್ತಾನೆ. ಇದೊಂಥರಾ ನಾ ಸತ್ತಂಗೆ ಮಾಡ್ತೀನಿ, ನೀ ಅತ್ತಂಗೆ ಮಾಡು ಎನ್ನುವಂತೆ. ಸರ್ಕಾರಿ ಕೆಲಸ ಅಂದರೆ ಬೇಕಾಬಿಟ್ಟಿಯಾಗಿ ಕಾಟಾಚಾರಕ್ಕೆ ಲೆಕ್ಕ




ತೋರಿಸಲಿಕ್ಕೆ ಮಾಡುವುದು ಅಂತಾಗಿದೆ. ನಾನೂ ಸರ್ಕಾರಿ ಸ್ಕೂಲ್ ಟೀಚರ್ರೇ. ನಮ್ಮನ್ನು ಸರ್ಕಾರ ಹೆಂಗೆ ದುಡಿಸ್ಕೋತಿದೆ ಗೊತ್ತಾ. ಕೋಳಿ-ಕುರಿಗಳ ಲೆಕ್ಕ ಬರಿಯೋಕೂ ನಾವೇ, ಓಟ್ ಲಿಸ್ಟ್ ಮಾಡಕ್ಕೂ ನಾವೇ. ನಂದು ನೋಡಿ, ದಾವಣಗೆರೆ; ನನ್ನನ್ನ ಇಲ್ಲಿಗೆ ಮುನ್ನೂರು ಕಿಲೋಮೀಟರು ದೂರಕ್ಕೆ ವರ್ಗ ಮಾಡಿದ್ದಾರೆ. ನನ್ನ ಗಂಡ ವ್ಯವಸಾಯ ಮಾಡ್ತಾರೆ. ಎರಡು ಸಣ್ಣ ಮಕ್ಕಳಿದಾವೆ. ಮನೇಲಿ ವಯಸ್ಸಾದ ಅತ್ತೆ-ಮಾವ ಇದಾರೆ. ಇಲ್ಲಿಯವರು ಕೆಲ ಟೀಚರ್‌ಗಳು ನಮ್ಮೂರಿನ ಕಡೆ ಇದ್ದಾರೆ. ಅವರಿಗೂ ತೊಂದರೆ, ನಮಗೂ ತೊಂದರೆ. ನಾವಿಲ್ಲಿ ದಿನಕ್ಕೊಂದೇ ಬಸ್ ಹೋಗುವ ಗುತ್ತಿ ಅನ್ನೋ ಕುಗ್ರಾಮಕ್ಕೆ ಹೋಗಿ ಪಾಠ ಮಾಡಬೇಕು. ಕೆಲಸ ಮಾಡುವ ಅನುಕೂಲವಿಲ್ಲ, ಕೆಲಸ ಮಾಡದೆ ವಿಧಿ ಇಲ್ಲ. ನನ್ನ ಸ್ಟಾಪ್ ಬಂತು ನಾನಿಳೀತೀನಿ ಎಂದು ಆ ಇಕ್ಕಟ್ಟಿನ ನಡುವೆಯೇ ನುಗ್ಗಾಡಿಕೊಂಡು ಅಂತೂ ಇಂತೂ ಕೆಳಗಿಳಿದಳು.

ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಬರುತ್ತಿರುವ ವಾರದ ಮಗುವಿನ ತಾಯಿ, ಈ ಸಖೆ-ಬಿಸಿಗೆ ರಚ್ಚೆ ಹಿಡಿದು ಕಿರುಚಾಡುತ್ತಾ ಸಂಕಟಪಡುತಿದ್ದ ಮಗುವನ್ನು ತನ್ನ ತಾಯಿಗೆ ಕೊಟ್ಟು ಸಮಾಧಾನಿಸಲು ಹೇಳುತ್ತಿದ್ದಳು. ತಾರಕ ಸ್ವರದಲ್ಲಿ ಅಳುತಿದ್ದ ಮಗುವಿನತ್ತ ತಿರುಗಿ ಕೂತಲ್ಲಿಂದಲೇ ಕತ್ತು ಎತ್ತರಿಸಿ ನೋಡಿದ ತೋಟಾದ ಕರೀಗೌಡರು, ಮಗೀಗೆ ಉಸಿರು ಕಟ್ಟೋಹಾಗೆ ಸ್ವಟರ್ರು, ಮಂಕೀಟೋಪಿ ಹಾಕಿ, ಬಿಗಿಯಾಗಿ ಅವುಚಿಕೊಂಡು ಕೂತ್ರೆ, ಆ ಮಗಾ ಬದ್ಕಿರ್ತದಾ? ಮೊದ್ಲು, ಹಾಕಿರಾ ಟೋಪಿ, ಸ್ವಟರ್ನಾ ತಗ್ದು, ಗಾಳಿಯಾಡಂಗೆ ಮಾಡಿ ಎಂದವರೇ, ಮಕ್ಳು ಹುಟ್ಸುದ್ರೆ ಸಾಕಾಗಲ್ಲ, ಸಾಕದ್ನೂ ಕಲೀಬೇಕುಟಿ ಎಂದು ಮೆತ್ತಗೆ ಅಂದ್ರು. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248